# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ

ಅಂಜನಾಪುರ ಉಪ ವಿಭಾಗ

2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಆರ್.ಬಿ.ಐ ಲೇಔಟ್, ಕೊತ್ತನೂರು ಮುಖ್ಯರಸ್ತೆ, ಬೆಂಗಳೂರು-560078

ಸಂಖ್ಯೆ : ಸ.ಕಾ.ಅ/ಅ.ಉ.ವಿ/ಪಿ.ಆರ್/ /2022-23 ದಿನಾಂಕ :

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಿಷಯ: ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ.ಬಿ(12)ಪಿಆರ್/35/2020-21 ದಿ:21.09.2020 ರವರ ಆದೇಶದಂತೆ ದಿ:13-07-2022 ರಂದು ವಾರ್ಡ್ ನಂ.195-ಕೋಣನಕುಂಟೆ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

********

### ಸಭೆಗೆ ಹಾಜರಾಗಿದ್ದವರ ಅಧಿಕಾರಿ/ಸಿಬ್ಬಂದಿಗಳ ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ | ಹಾಜರಾತಿ |
|---|---|---|---|
| 1 | ಶ್ರೀ ಟಿ.ನಟರಾಜ | ನೋಡಲ್ ಅಧಿಕಾರಿ | ಹಾಜರಿರುತ್ತಾರೆ. |
| 2 | ಶ್ರೀ ಶಿಲ್ಪ.ಎನ್ | ಸದಸ್ಯ ಕಾರ್ಯದರ್ಶಿ/ಸಹಾಯಕ ಅಭಿಯಂತರರು | ಹಾಜರಿರುತ್ತಾರೆ. |
| 3 | ಶ್ರೀ ಶೋಭಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಗೈರು ಹಾಜರಿರುತ್ತಾರೆ |
| 4 | ಶ್ರೀ ಶಿಲ್ಪ | ಕಂದಾಯ ಪರಿವೀಕ್ಷಕರು | |
| 5 | ಶ್ರೀ ಮೋಹನ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 6 | ಶ್ರೀ ರಮೇಶ್ | ಸಹಾಯಕ ಅಭಿಯಂತರರು (ಬೆಸ್ಕಾಂ) | ಗೈರು ಹಾಜರಿರುತ್ತಾರೆ |
| 7 | ಶ್ರೀ ಅಕ್ಷಯ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) | ಹಾಜರಿರುತ್ತಾರೆ. |
| 8 | ಶ್ರೀ ಮುಕುಂದ | ಕಂದಾಯ ಪರಿವೀಕ್ಷಕರು | ಹಾಜರಿರುತ್ತಾರೆ. |
| 9 | ಶ್ರೀ ರಾಮಚಂದ್ರ | ಟ್ಯಾಕ್ಸ್ ಇನ್ಸ್‌ಪೆಕ್ಟರ್ | ಹಾಜರಿರುತ್ತಾರೆ. |
| 10 | ಶ್ರೀ ಜಗದೀಶ್ | ಬೀದಿ ದೀಪಗಳ ನಿರ್ವಹಣೆ | ಗೈರು ಹಾಜರಿರುತ್ತಾರೆ. |

### ಸಭೆಗೆ ಹಾಜರಾಗಿದ್ದವರ ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘ/ಸಾರ್ವಜನಿಕರು ವಿವರಗಳು

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಬಡಾವಣೆಗಳ ಕ್ಷೇಮಾಭಿವೃದ್ಧಿ ಸಂಘ | ಹಾಜರಾತಿ |
|---|---|---|---|
| 1 | ಶ್ರೀ ಅನಂತಪದ್ಮನಾಭ | | ಹಾಜರಿರುತ್ತಾರೆ. |
| 2 | ಶ್ರೀ ಹೆಚ್.ರಮೇಶ್ ಭಟ್ | | ಹಾಜರಿರುತ್ತಾರೆ. |
| 3 | ಶ್ರೀ ಸಿ.ಎನ್.ರಾಜಸುಬ್ರಮಣ್ಯ | | ಹಾಜರಿರುತ್ತಾರೆ. |
| 4 | ಶ್ರೀ ನರಸಿಂಹ ಮೂರ್ತಿ | | ಹಾಜರಿರುತ್ತಾರೆ. |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೋಣನಕುಂಟೆ ವಾರ್ಡ್ ಸಂಖ್ಯೆ.195ರಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ ಟಿ.ನಟರಾಜ ರವರು ದಿನಾಂಕ: 13-07-2022 ರಂದು ಗುರುವಾರ 11.30ಕ್ಕೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಸಮಿತಿಯ ಸದಸ್ಯರಿಗೆ ಶ್ರೀ ಕಾರ್ಯದರ್ಶಿ/ಸಹಾಯಕ ಅಭಿಯಂತರರು ಆದ ಶ್ರೀ ಮಾರುತಿ.ಕೆ.ಎನ್ ರವರು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಮು.ತಿ.ನೋ 2ಕ್ಕೆ

Scanned with CamScanner

1. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ)**

ವಾರ್ಡ್ ವ್ಯಾಪ್ತಿಯಲ್ಲಿನ ಶ್ರೇಯಸ್ ಕಾಲೋನಿಯ 9, 10 ಮತ್ತು 11ನೇ ಅಡ್ಡ ರಸ್ತೆಗಳಲ್ಲಿ ಒಳಚರಂಡಿ ಸರಿಯಾಗಿ ನಿರ್ವಹಣೆಯಾಗುತ್ತಿಲ್ಲ ಹಾಗೂ ಆರ್.ಬಿ.ಐ ಬಡಾವಣೆಯ 2ನೇ ಮತ್ತು 3ನೇ ಮೇನ್‌ಗಳಲ್ಲಿ ನೀರು ಸರ್ಮಪಕವಾಗಿ ಹರಿಯದೇ ಇರುವುದು ಮತ್ತು ನವೋದಯನಗರ ಆಕ್ಸಿಸ್ ಅಪಾರ್ಟ್‌ಮೆಂಟ್ ತ್ಯಾಜ್ಯ ನೀರನ್ನು ರಸ್ತೆ ಚರಂಡಿಗೆ ಬಿಟ್ಟಿರುವುದು ಈ ಹಿಂದೆ ತಿಳಿಸಲಾಗಿದ್ದು ಇರುವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವ ಬಗ್ಗೆ ಸಭೆಯಲ್ಲಿ ತಿಳಿಸಲಾಗಿರುತ್ತದೆ.

ಮೇಲ್ಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

2. **ಸಹಾಯಕ ಕಾರ್ಯಪಾಲಕ ಅಭಿಯಂತರರು, (ಅರಣ್ಯಾಧಿಕಾರಿಗಳು) ಬೊಮ್ಮನಹಳ್ಳಿ ವಲಯ**

ವಾರ್ಡ್ ಸುತ್ತ ಮುತ್ತಲಿನ ಪ್ರದೇಶದಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ಗಿಡ ಮರಗಳ ರೆಂಬೆಗಳು ರಸ್ತೆಗೆ ಬಾಗಿದ್ದಿ ಸದರಿ ಬಾಗಿರುವ ರೆಂಬೆಗಳನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಮೇಲ್ಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ಅರಣ್ಯಾಧಿಕಾರಿಗಳು) ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

3. **ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೆಸ್ಕಾಂ) ಬೊಮ್ಮನಹಳ್ಳಿ ವಲಯ**

ವಾರ್ಡ್ ಸುತ್ತ ಮುತ್ತಲಿನ ಪ್ರದೇಶದ ಪಾಲಿಕೆ ವತಿಯಿಂದ ಯಾವುದೇ ಅನುಮತಿ ಇಲ್ಲದೆ ಬೆಸ್ಕಾಂ ವತಿಯಿಂದ ಅಧೀಕೃವಾಗಿ ರಸ್ತೆ ಅಗೆದಿರುವುದು ಕಂಡುಬಂದಿರುವ ಬಗ್ಗೆ ಚರ್ಚಿಸಲಾಯಿತು.

ಮೇಲ್ಕಂಡ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, (ವಿದ್ಯುತ್) ಬೊಮ್ಮನಹಳ್ಳಿ ವಲಯ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

4. **ಸಹಾಯಕ ಕಾರ್ಯಪಾಲಕ ಅಭಿಯಂತರರು (ಅಂಜನಾಪುರ ಉಪ ವಿಭಾಗ)**

ಹಿಂದಿನ ವಾರ್ಡ್ ಸಮಿತಿ ಸಭೆ ನಡವಳಿಗಳ ಬಗ್ಗೆ ತೆಗೆದುಕೊಂಡು ಕ್ರಮಗಳ ವರದಿ ನೀಡುವ ಬಗ್ಗೆ ಸದಸ್ಯರು ಕೋರಿರುತ್ತಾರೆ

1. ಕೊತ್ತನೂರು 1ಎ ಅಡ್ಡ ರಸ್ತೆ ಮತ್ತು 4ನೇ ಅಡ್ಡ ರಸ್ತೆಗಳ ಚರಂಡಿಯಲ್ಲಿ ತುಂಬಿರುವ ಹೂಳು ತೆಗೆಯುವುದು, ಖಾಲಿ ನಿವೇಶನಗಳಲ್ಲಿ ತುಂಬಿರುವ ತ್ಯಾಜ್ಯಗಳನ್ನು ತೆರವುಗೊಳಿಸುವುದು,
2. ಪ್ರತಿ ವಾರದ ಕೊನೆ ದಿನದಲ್ಲಿ Intensive Cleaninig ಮಾಡುವುದು ಹಾಗೂ
3. ಸಿ.ಸಿ ಕ್ಯಾಮರಗಳನ್ನು ಅಳವಡಿಸುವುದರ ಬಗ್ಗೆ ಕೋರಿರುತ್ತಾರೆ.

ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ಅಂಜನಾಪುರ ಉಪ ವಿಭಾಗ ರವರಿಗೆ ಮಾನ್ಯ ಅಧ್ಯಕ್ಷರು ಸೂಚಿಸಿರುತ್ತಾರೆ.

**2022-23 ಆಯವ್ಯಯದ ಹಂಚಿಕೆಯಾಗಿರುವ ಬಗ್ಗೆ.**

2022-23ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ ವಾರ್ಡ್ ಸಂಖ್ಯೆ 195, ಕೋಣನಕುಂಟೆ ವಾರ್ಡ್ ವ್ಯಾಪ್ತಿಗೆ 600.00 ಲಕ್ಷಗಳ ಅನುದಾನ ದೊರೆತಿರುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದ್ದು, ಸದರಿ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

Scanned with CamScanner

ಕಾಮಗಾರಿಗಳ ವಿವರ

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|
| 1 | Filling of Pot Holes in ward no 195 Konanakunte | : | 30.00 |
| 2 | Engaing Tractor and Labours at in ward no 195 Konanakunte | : | 40.00 |
| 3 | Improvements to Footpath and drains at Konanakunte ward no Limits in ward no 195 | : | 30.00 |
| 4 | Drilling of Borewells and Providing Missing links to water supply lines in ward no 195 Konanakunte | : | 20.00 |
| 5 | Construction of Culverts, drains and Providing CC Roads in ward no 195 Konanakunte | : | 60.00 |
| 6 | Maintenance of AEE and ARO Office Buildings in ward no 195 Konanakunte | : | 20.00 |
| 7 | Improvements to Road and drain at Suncity layout and Nataraj Layout in ward no 195 Konanakunte | : | 100.00 |
| 8 | Improvements to Road and drain at Nrupathunga nagara in ward no 195 Konanakunte | : | 100.00 |
| 9 | Improvements to Road and drain at S.K.Nataraj Layout, Mounashree Layout and Laxmi Street in ward no 195 Konanakunt | : | 100.00 |
| 10 | Improvements to Road and drain at Navodaya Nagara 4th , 5th, 6th, 4th A Main and 7th Cross in ward no 195 Konanakunte | : | 100.00 |

9.ನೋಡಲ್ ಅಧಿಕಾರಿ:-

ಅದರಂತೆ ವಾರ್ಡ್ ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರಾದ ಶ್ರೀ ಟಿ.ನಟರಾಜ ರವರು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಆದ್ಯತೆ ಮೇರೆಗೆ ಸೂಕ್ತ ಕ್ರಮ ಜರುಗಿಸಲಾಗುವುದಾಗಿ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

-ಸಹಿ-
ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.195 ಕೋಣನಕುಂಟೆ

-ಸಹಿ-
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ.195 ಕೋಣನಕುಂಟೆ

Scanned with CamScanner